‘ವ್ಯವಸಾಯ’, ‘ಕೊರಡು ಕೊನರಿದಾಗ’, ಹಿಂಗಾರು’, ‘ವಿಚಾರಿತ’ ಇತ್ಯಾದಿ).

ಮೇಲೆ ಹೇಳಿದ ಪುಸ್ತಕಗಳ ವೈವಿಧ್ಯ, ವಿಸ್ತಾರಗಳ ಕಿರುಪರಿಚಯ ಮಾಡಿಕೊಡುವುದೂ ಇಲ್ಲಿ ಸಾಧ್ಯವಿಲ್ಲ. ಆದರೆ, ಅವರ ಎರಡು ಕೆಲಸಗಳನ್ನು ಮಾತ್ರ ಕೊಂಚ ವಿವರಿಸಬೇಕು.

ಕನ್ನಡದಲ್ಲಿ ಸಮರ್ಥವಾದ ಜೀವನ ಚರಿತ್ರಗಳಾಗಲೀ ಆತ್ಮಕಥೆಗಳಾಗಲೀ ಬಹಳ ಬಹಳ ಕಡಿಮೆ. ಅಷ್ಟೇ ಮುಖ್ಯವಾಗಿ ಒಬ್ಬ ಲೇಖಕನನ್ನು ತೆಗೆದುಕೊಂಡು ಅವನ ಸಮಗ್ರ ಕೃತಿಗಳ ವಿಶ್ಲೇಷಣಾತ್ಮಕವೂ, ಒಳನೋಟಗಳಿಂದ ಕೂಡಿದುದೂ ಆದ ಕೃತಿಗಳೂ ನಮ್ಮಲ್ಲಿ ಅಪರೂಪ. ಆಮೂರರು ಅರವತ್ತೈದು ವರ್ಷ ಕಳೆದ ಮೇಲೆ ಇಂತಹ ಮೂರು ನಾಲ್ಕು ಕೃತಿಗಳನ್ನು ರಚಿಸಿದರು. (ಬೇಂದ್ರೆ, ಕುವೆಂಪು, ಶ್ರೀರಂಗ, ಅನಂತಮೂರ್ತಿ ಮತ್ತು ಗಿರೀಶ ಕಾರ್ನಾಡ) ಇವುಗಳಲ್ಲಿ ಬೇಂದ್ರೆಯವರ ಕಾವ್ಯದ ಬೆಳವಣಿಗೆಯನ್ನು ವಿವರವಾಗಿ ಪರಿಶೀಲಿಸುವುದರ ಜೊತೆಗೆ ಅವರ ನಾಟಕ, ಸಾಹಿತ್ಯತತ್ತ್ವ, ವಿಮರ್ಶೆ, ಪ್ರಬಂಧ ಮುಂತಾದ ಬರವಣಿಗೆಯನ್ನೂ ಅಧ್ಯಯನ ಮಾಡುವ ‘ಭುವನದ ಭಾಗ್ಯ’ ಅನೇಕ ಪ್ರಶಸ್ತಿಗಳು ಮಾತ್ರವಲ್ಲದೆ ಓದುಗ, ವಿಮರ್ಶಕರ ಪ್ರೀತಿ ಗೌರವಗಳನ್ನು ಪಡೆದಿರುವ ಸಮತೂಕ–ಸಮತೋಲನಗಳ ಒಳನೋಟಗಳಿಂದ ನಿಬಿಡವಾದ ಕೃತಿ. ಆದರೆ, ಇದನ್ನು ಬರೆದು ಮುಗಿಸಿದ ಇಪ್ಪತ್ತೈದು ವರ್ಷಗಳ ನಂತರ ಬೇಂದ್ರೆಯವರ ಸಾಹಿತ್ಯದಲ್ಲಿ ತತ್ತ್ವ, ಕಾವ್ಯ ಮತ್ತು ಅನುವಾದಗಳನ್ನು ಕುರಿತ ‘ಒಮ್ಮುಖ’ ಎಂಬ ಇನ್ನೊಂದು ಪುಸ್ತಕವನ್ನು ಆಮೂರರು ಬರೆದರು. ಆಗ ಅವರಿಗೆ ತೊಂಬತ್ತೊಂದರ ಹರೆಯ. ಅವರ ಇಚ್ಛಾಶಕ್ತಿ ಈ ಬಗೆಯದು.

ಬೇಂದ್ರೆ ಮತ್ತು ಕುವೆಂಪು ಕ್ಯಾಂಪುಗಳನ್ನು ಕಟ್ಟಿಕೊಂಡಿದ್ದ ಸನ್ನಿವೇಶದಲ್ಲಿ ಕುವೆಂಪು ಅವರ ಬಗ್ಗೆಯೂ ಮತ್ತೊಂದು ಪುಸ್ತಕವನ್ನು ಬರೆಯಲು ಅಗತ್ಯವಾದ ತೆರೆದ ಮನಸ್ಸು ಆಮೂರರಿಗೆ ಇತ್ತು. ಅಷ್ಟೇಕೆ, ಕುವೆಂಪು ಅವರ ‘ಶ್ರೀ ರಾಮಾಯಣ ದರ್ಶನಂ’ ಮಹಾಕಾವ್ಯವನ್ನು ಕುರಿತ ಆಮೂರರ ಲೇಖನ ಆ ಪುಸ್ತಕವನ್ನು ಕುರಿತು ಬಂದಿರುವ ಅತ್ಯುತ್ತಮ ಲೇಖನಗಳಲ್ಲಿ ಒಂದು. ಹಾಗೆಂದು ಈ ಪುಸ್ತಕಗಳು ಆರಾಧನಾಗ್ರಂಥಗಳಲ್ಲ. ಎಲ್ಲ ಪುಸ್ತಕಗಳಲ್ಲಿಯೂ ಹಲವು ಭಿನ್ನಾಭಿಪ್ರಾಯಗಳನ್ನು ಹೇಳಲು ಆಮೂರರಿಗೆ ಸಾಧ್ಯವಾಗಿದೆ. ಅವರಲ್ಲಿ ವಿನಯ ಮತ್ತು ದಿಟ್ಟತನ ಎರಡೂ ಇದ್ದವು. ಅದನ್ನೇ ಪ್ರೀತಿ ಮತ್ತು ನಿರ್ಭೀತಿ ಎಂದೂ ಕರೆಯಬಹುದು. ಇಂಥ ಕೃತಿಗಳೊಂದಿಗೆ ವಾಗ್ವಾದ, ಸಂವಾದ ಮಾಡಬಹುದು. ಆದರೆ, ಅವುಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಕವಿತೆ ಮತ್ತು ನಾಟಕಗಳನ್ನು ಕುರಿತು ಬರೆದರೂ ಕಥಾಸಾಹಿತ್ಯ ಆಮೂರರ ಪ್ರೀತಿಯ ಪ್ರಕಾರ. ಕಥೆ, ಕಾದಂಬರಿಗಳನ್ನು ಕುರಿತು ಅವರಷ್ಟು ವ್ಯಾಪಕವಾಗಿ ಆಳವಾಗಿ ಬರೆದಿರುವವರು ಕಡಿಮೆ. ಕೆರೂರು ವಾಸುದೇವಾಚಾರ್ಯರಿಂದ ಮೊದಲಾಗಿ ಅಮರೇಶ ನುಗಡೋಣಿ, ನೇಮಿಚಂದ್ರರವರೆಗೆ ಅವರ ಬರಹಗಳ ಹರಹಿದೆ. ಕಥೆ ಮತ್ತು ಕಾದಂಬರಿಗಳನ್ನು ಕುರಿತ ಬರವಣಿಗೆಯನ್ನು ಒಂದು ಕಡೆ ಸೇರಿಸಿ ಅವುಗಳಲ್ಲಿ ಒಂದು ಸಾತತ್ಯವನ್ನೂ ಒಡಮೂಡಿಸಿರುವ ಎರಡು ಬೃಹತ್ ಸಂಪುಟಗಳು ಬಹು ಕಾಲ ಉಳಿಯಲಿವೆ. ಅವುಗಳನ್ನು ಬಳಸಿಕೊಳ್ಳುವ ವಿಮರ್ಶಾವಿವೇಕವನ್ನು ನಮ್ಮ ವಿದ್ವಾಂಸರು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಓದುಗರು ತೋರಿಸಬೇಕು.

ಕಳೆದ ಮೂವತ್ತು ವರ್ಷಗಳಲ್ಲಿ ಕರ್ನಾಟಕದ ಸಮಾಜ ಮತ್ತು ಸಂಸ್ಕೃತಿಗಳಲ್ಲಿ ನಡೆದಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ ಆಮೂರರ ಒಟ್ಟು ಬರವಣಿಗೆಯನ್ನು ಗಮನಿಸಿದಾಗ ಕೆಲವು ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಸಾಹಿತ್ಯಕೃತಿಗಳನ್ನು ಆಳವಾಗಿ ಪರಿಶೀಲಿಸದ, ಬೀಸುಮಾತುಗಳ ಸಂಸ್ಕೃತಿವಿಮರ್ಶೆಯು ಶೂನ್ಯಸಂವಾದವಾದರೆ, ಸಾಮಾಜಿಕ ಸಂಗತಿಗಳ ಕಡೆಗೆ ಯಾವುದೇ ಗಮನ ಹರಿಸದೆ ಕೇವಲ ಕೃತಿ/ಆಕೃತಿನಿಷ್ಠವಾಗಿ ಬಿಡುವ ಅಕಡೆಮಿಕ್ ವಿಮರ್ಶೆಯೂ ಬಹುಬೇಗ ದಿಕ್ಕುತಪ್ಪುತ್ತದೆ. ಇವೆರಡೂ ಹಾಸುಹೊಕ್ಕಾಗಿ ಬರದಿದ್ದರೆ, ಎರಡು ನೆಲೆಗಳಿಗೂ ಅನ್ಯಾಯವೇ.